ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | **312** |
| 2 | ಸದಸ್ಯರ ಹೆಸರು | ಶ್ರೀ ಘೋಟ್ನೇಕರ ಶ್ರೀಕಾಂತ ಲಕ್ಷ್ಮಣ<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3 | ಉತ್ತರಿಸಬೇಕಾದ ದಿನಾಂಕ | 15.12.2021 |
| 4 | ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. | ಪ್ರಶ್ನೆ ವಿವರ | ಉತ್ತರ |
|---|---|---|
| ಅ) | ಕಾರವಾರ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿ ಬಿನ್.ಶೇತ್ಕಿ ಜಮೀನುಗಳಿಗೆ ಇ-ಸ್ವತ್ತು ಮತ್ತು ಇ-ಖಾತೆ ಹಾಗೂ ಲೇ ಔಟ್ ನಂತಹ ಗಂಭೀರ ಸಮಸ್ಯೆಯಿಂದ ವಿನಾಯಿತಿ ನೀಡಿ ಮರಳಿ ಪಹಣಿ ಪತ್ರಿಕೆ (ಆರ್.ಟಿ.ಸಿ) ಮುಖಾಂತರ ವ್ಯವಹರಿಸಲು ಸರ್ಕಾರದ ಗಮನಕ್ಕೆ ಬಂದಿದೆಯೇ (ವಿವರ ನೀಡುವುದು) | ಬಂದಿದೆ<br><br>ಸರ್ಕಾರದ ಪತ್ರ ಸಂಖ್ಯೆ.ಗ್ರಾಅಪ 266 ಗ್ರಾಪಂಅ 2015(ಭಾಗ-1), ದಿನಾಂಕ 13-01-2016 ರಲ್ಲಿ ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ, ಚಿಕ್ಕಮಗಳೂರು ಮತ್ತು ಕೊಡಗು ಜಿಲ್ಲೆಗಳಿಗೆ ಇ-ಸ್ವತ್ತು ತಂತ್ರಾಂಶದಿಂದ ತಾತ್ಕಾಲಿಕವಾಗಿ ವಿನಾಯಿತಿ ನೀಡಲು ನೋಂದಣಿ ಮತ್ತು ಮುದ್ರಾಂಕ ಇಲಾಖೆಗೆ ನಿರ್ದೇಶನ ನೀಡಲಾಗಿರುತ್ತದೆ.<br><br><u>ಸಮಸ್ಯೆಯನ್ನು ಬಗೆಹರಿಸಲು ಸರ್ಕಾರವು ಕೈಗೊಂಡ ಕ್ರಮಗಳು</u> |
| ಆ) | ಸದರಿ ಸಮಸ್ಯೆಯನ್ನು ಸರ್ಕಾರವು ಕೂಡಲೇ ಗಮನ ಹರಿಸಿ ಬಗೆಹರಿಸಲು ಕ್ರಮ ಕೈಗೊಳ್ಳು ವುದೇ? (ವಿವರ ನೀಡುವುದು) | ರಾಜ್ಯದಲ್ಲಿ ಮರು ಭೂಮಾಪನ ಮಾಡುವ ಸಮಯದಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶಗಳ ಎಲ್ಲಾ ಜನ ವಸತಿ ಪ್ರದೇಶದ ಆಸ್ತಿ/ಸ್ವತ್ತುಗಳನ್ನು ಅಳತೆ ಮಾಡಿ ಹಕ್ಕು ದಾಖಲೆ ನಿರ್ವಹಣೆ ಮಾಡಲಾಗುವುದು. ಅದರಂತೆ ರಾಜ್ಯದಲ್ಲಿ ಸರ್ವೆ ಆಫ್ ಇಂಡಿಯಾದ ಸಂಸ್ಥೆಯ ಸಹಯೋಗದೊಂದಿಗೆ ಡ್ರೋನ್ ಬಳಸಿ ಮರು ಭೂಮಾಪನ ಮಾಡಲು ತೀರ್ಮಾನಿಸಲಾಗಿದ್ದು, ಕಾರ್ಯ ಪ್ರಗತಿಯಲ್ಲಿದೆ. ಹಾಗೂ ಎಲ್ಲಾ ಗ್ರಾಮಗಳಲ್ಲಿನ ಜನ ವಸತಿ ಪ್ರದೇಶಗಳ ಆಸ್ತಿಗಳನ್ನು ಅಳತೆ ಮಾಡಿ, ಪ್ರಾಪರ್ಟಿ ಕಾರ್ಡ (ಹಕ್ಕು ದಾಖಲೆ) ನೀಡುವ ಉದ್ದೇಶದಿಂದ ಕೇಂದ್ರ ಸರ್ಕಾರವು "ಸ್ವಮಿತ್ವ" ಯೋಜನೆಯನ್ನು ಜಾರಿಗೊಳಿಸಿದ್ದು, ಈ ಯೋಜನೆಯಡಿಯಲ್ಲಿ ಡ್ರೋನ್ ಮೂಲಕ ಗ್ರಾಮ ವಾಸಿಗಳ ವಾಸಸ್ಥಳದ ಆಸ್ತಿಗಳ ಸರ್ವೆ ಮಾಡಿ, ಪ್ರಾಪರ್ಟಿ ಕಾರ್ಡ ವಿತರಿಸಲಾಗುವುದು. ಪ್ರಥಮ ಹಂತದಲ್ಲಿ 16 ಜಿಲ್ಲೆಗಳಲ್ಲಿ ಈ ಯೋಜನೆಯನ್ನು ಕೈಗೆತ್ತಿಕೊಳ್ಳಲಾಗುತ್ತಿದೆ.<br><br>ಈ ರೀತಿಯಾಗಿ ಮರು ಭೂಮಾಪನ ಮತ್ತು ಸ್ವಮಿತ್ವ ಯೋಜನೆಯಡಿ ರಾಜ್ಯದ ಉಳಿದ ಜಿಲ್ಲೆಗಳ ಎಲ್ಲಾ ಗ್ರಾಮಗಳು/ಜನ ವಸತಿ ಪ್ರದೇಶಗಳನ್ನು ಹಂತ ಹಂತವಾಗಿ ಆಯ್ಕೆ ಮಾಡಿಕೊಂಡು, ಆಸ್ತಿಗಳ ಅಳತೆ ಮಾಡಿ, ಪ್ರಾಪರ್ಟಿ ಕಾರ್ಡ (ಹಕ್ಕು ದಾಖಲೆ) ನೀಡಲು ಕ್ರಮ ಕೈಗೊಳ್ಳಲಾಗುವುದು. |

<u>**ಸಂಖ್ಯೆ: ಕಂಇ 207 ಎಸ್‌ಎಸ್‌ಸಿ 2021**</u>

(ಆರ್.ಅಶೋಕ)
ಕಂದಾಯ ಸಚಿವರು